ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಚೇರಿ

ನಂ.14/3ಇ,
ರಾಷ್ಟ್ರೋತ್ಥಾನ ಪರಿಷತ್ ಕಟ್ಟಡ
3 ನೇ ಮಹಡಿ, ನೃಪತುಂಗ ರಸ್ತೆ,
ಬೆಂಗಳೂರು – 560 001
ದೂರವಾಣಿ : 080-22271628
ಫ್ಯಾಕ್ಸ್ : 080-22226082

ಕೈಜಇ/ಜಂ.ನಿ/6/"ವಿವಿಧೋದ್ದೇಶ ಸ.ಸಂ"/ಶಿರೋನಾಮೆ-ಕೈಜಡುವುದು/2015-16 ದಿ: 13/05/2015

14 MAY 2015

## ಸುತ್ತೋಲೆ

**ವಿಷಯ:** "ವಿವಿಧೋದ್ದೇಶ ಸಹಕಾರ ಸಂಘ" ಶಿರೋನಾಮೆಯನ್ನು ಕೈಬಿಡುವ ಸಂಬಂಧ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ಸುತ್ತೋಲೆಯ ಕುರಿತು

**ಉಲ್ಲೇಖ:** ಸಹಕಾರ ಸಂಘಗಳ ನಿಬಂಧಕರು ರವರ ಸುತ್ತೋಲೆ ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/144/2014-15, ದಿನಾಂಕ: 09.12.2014 ರನ್ವಯ ಹೊರಡಿಸಿರುವ ಸುತ್ತೋಲೆ ಸಂಖ್ಯೆ: 243.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ-1959 ರಡಿಯಲ್ಲಿ ನೋಂದಣಿಯಾಗುತ್ತಿರುವ ಸಹಕಾರ ಸಂಘಗಳು **"ವಿವಿಧೋದ್ದೇಶ ಸಹಕಾರ ಸಂಘ"** ಎಂಬ ಶಿರೋನಾಮೆಯನ್ನು ಬಳಸಿಕೊಂಡು, ಸಹಕಾರ ಸಂಘಗಳನ್ನು ಸಂಘಟಿಸಿ, ಅನಗತ್ಯ ಧ್ಯೇಯೋದ್ದೇಶಗಳನ್ನು ಸೇರ್ಪಡೆ ಮಾಡಿಕೊಂಡು, ಗೃಹ ನಿರ್ಮಾಣ, ಪತ್ತು ಮತ್ತು ಇತರೆ ಚಟುವಟಿಕೆಗಳನ್ನು ಸಮ್ಮಿಲನಗೊಳಿಸಿ, ದುರ್ಬಳಕೆ ಮಾಡುತ್ತಿರುವುದು ಕಂಡುಬಂದಿದ್ದು, ಇನ್ನು ಮುಂದೆ ವಿವಿಧೋದ್ದೇಶ ಪದವನ್ನು ಶಿರೋನಾಮೆಯಲ್ಲಿ ಉಪಯೋಗಿಸಿ ಸಹಕಾರ ಸಂಘಗಳನ್ನು ನೋಂದಣಿ ಮಾಡತಕ್ಕದ್ದಲ್ಲ ಹಾಗೂ ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಆದರೆ ಉದ್ದೇಶದಲ್ಲಿ ಅವರು ವಿವಿಧೋದ್ದೇಶ ಪದವನ್ನು ಬಳಸಬಹುದಾಗಿದೆ. ಗೃಹ ನಿರ್ಮಾಣ ಸಹಕಾರ ಸಂಘಗಳ ಉದ್ದೇಶವು ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಸೀಮಿತವಾಗಿರತಕ್ಕದ್ದೆಂದು ಆದೇಶಿಸಿದ್ದಾರೆ/ನಿರ್ದೇಶಿಸಿದ್ದಾರೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ಗೆ,
ರಾಜ್ಯದ ಎಲ್ಲಾ ಜಂಟಿನಿರ್ದೇಶಕರುಗಳು,
ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು,
ರಾಜ್ಯದ ಎಲ್ಲಾ ಸಹಾಯಕನಿರ್ದೇಶಕರುಗಳು,
ಕೈಮಗ್ಗ ಮತ್ತು ಜವಳಿ ಇಲಾಖೆ,

14 MAY 2015
34

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1. ಅಲಿ ಅಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಆರ್ಎಸ್ಆರ್/ಎಕ್ಸ್ಎಂಸಿ/144 /2014-15 ದಿನಾಂಕ: 7-12-2014

-: ಸುತ್ತೋಲೆ ಸಂಖ್ಯೆ:-243

ವಿಷಯ;- ವಿವಿಧೋದ್ದೇಶ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಕುರಿತು.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ನೋಂದಣಿಯಾಗುತ್ತಿರುವ ಸಹಕಾರ ಸಂಘಗಳು 'ವಿವಿಧೋದ್ದೇಶ ಸಹಕಾರ ಸಂಘ' ಎಂಬ ಶಿರೋನಾಮೆಯಲ್ಲಿ ಸಹಕಾರ ಸಂಘಗಳನ್ನು ಸಂಘಟಿಸಿ ಅನಗತ್ಯ ಧ್ಯೇಯೋದ್ದೇಶಗಳನ್ನು ಸೇರ್ಪಡೆ ಮಾಡಿಕೊಂಡು, ಗೃಹ ನಿರ್ಮಾಣ, ಪತ್ತು ಮತ್ತು ಇತರೆ ಚಟುವಟಿಕೆಗಳನ್ನು ಸಮ್ಮಿಲನಗೊಳಿಸಿ ದುರ್ಬಳಕೆ ಮಾಡುತ್ತಿರುವುದು ಕಂಡು ಬಂದಿದ್ದು, ಇದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಮಾರ್ಗಸೂಚಿಗಳ ಔಚಿತ್ಯತೆಯನ್ನು ಮನಗಂಡು ಮುಂದಿನ ನಿರ್ದೇಶನಗಳನ್ನು ನೀಡಿದೆ:-

1. ಇನ್ನು ಮುಂದೆ 'ವಿವಿಧೋದ್ದೇಶ' ಪದವನ್ನು ಶಿರೋನಾಮೆಯಲ್ಲಿ ಉಪಯೋಗಿಸಿ ಸಹಕಾರ ಸಂಘಗಳನ್ನು ನೋಂದಣಿ ಮಾಡತಕ್ಕದಲ್ಲ. ಆದರೆ ಅವರ ಉದ್ದೇಶದಲ್ಲಿ ಅವರು ವಿವಿಧೋದ್ದೇಶ ಪದವನ್ನು ಬಳಸಬಹುದಾಗಿದೆ.
2. ಗೃಹ ನಿರ್ಮಾಣ ಸಹಕಾರ ಸಂಘಗಳ ಉದ್ದೇಶವು ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಸೀಮಿತವಾಗಿರತಕ್ಕದ್ದು.

ಸಂಬಂಧಿಸಿದ ಪ್ರಾಧಿಕಾರಿಗಳು ಸಹಕಾರ ಸಂಘಗಳ ನೋಂದಣಿ, ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಯನಿರ್ವಹಿಸತಕ್ಕದ್ದು ಹಾಗೂ ಕರಾರುವಕ್ಕಾಗಿ ಕಟ್ಟುನಿಟ್ಟಾಗಿ ಪಾಲನೆ ಮಾಡತಕ್ಕದ್ದು.

(ಡಾ:ಎನ್.ಎಸ್.ಚನ್ನಪ್ಪಗೌಡ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಕೆಳಕಂಡವರಿಗೆ ಕಳುಹಿಸುತ್ತಾ ಸಹಕಾರಿಗಳ ಉಪನಿಯಮಗಳ ತಿದ್ದುಪಡಿ ಸಂದರ್ಭದಲ್ಲಿ ಮೇಲಿನ ನಿರ್ದೇಶನಗಳನ್ನು ಪಾಲನೆ ಮಾಡಲು ಸೂಚಿಸಿದೆ.

1)ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳು
2)ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
3)ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
4)ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
5)ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು.
6)ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ನಿರ್ಮಾಣ ಭವನ ಡಾ: ರಾಜ್ ಕುಮಾರ್ ರಸ್ತೆ, ಬೆಂಗಳೂರು-560010 ಇವರಿಗೆ ಮಾಹಿತಿಗಾಗಿ.